**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಎಂ.ಜಿ.ಮುಳೆ ಇವರು ನಿಯಮ-330 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಹೇಳಿಕೆ:**

**ಸೂಚನೆ :**

ಭಾರತದಲ್ಲಿ ಅಡುಗೆ ಎಣ್ಣೆಯ ಮರುಬಳಕೆಯಿಂದ ಯುವಕರಲ್ಲಿ ಹೃದಯ ಕಾಯಿಲೆ, ಕ್ಯಾನ್ಸರ್ ಸೇರಿದಂತೆ ಗಂಭೀರ ಆರೋಗ್ಯ ಸಮಸ್ಯೆಗಳು ಉಂಟಾಗುತ್ತಿರುವ ಬಗ್ಗೆ ಕೇಂದ್ರ ಆರೋಗ್ಯ ಸಚಿವಾಲಯ ಎಚ್ಚರಿಸಿದ್ದು, ಎಫ್.ಎಸ್.ಎಸ್.ಎ.ಐ ಮಾರ್ಗಸೂಚಿ ಹಾಗೂ ಮಾನದಂಡಗಳಂತೆ ಪಕ್ಕದ ಕೇರಳ ಸರ್ಕಾರವು ಮೂರು ಬಾರಿಗಿಂತ ಹೆಚ್ಚು ಬಾರಿ ಅಡುಗೆ ಎಣ್ಣೆಯನ್ನು ಪುನರ್ ಬಳಸದಂತೆ ನಿಷೇಧಿಸಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲೂ ಸಹ ಇದೇ ನಿಯಮವನ್ನು ಅಳವಡಿಸಿ ಮೂರು ಬಾರಿಗಿಂತ ಹೆಚ್ಚು ಬಾರಿ ಅಡುಗೆ ಎಣ್ಣೆ ಬಳಸುವುದನ್ನು ನಿಷೇಧಿಸಬೇಕೆನ್ನುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ.

**ಹೇಳಿಕೆ:**

ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯ ಆಹಾರ ಸುರಕ್ಷತಾ ವಿಭಾಗವು ಕೇಂದ್ರ ಸರ್ಕಾರದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ-2006, ನಿಯಮಗಳು 2011 ಗಳನ್ನು ಜಾರಿಗೊಳಿಸುವ ಹೊಣೆಗಾರಿಕೆ ಹೊಂದಿರುತ್ತದೆ.

Food Safety and Standards (License and Registration of Food Business) Regulations-2011 ನಿಯಮಗಳ Shedule-4, Part-V of Section II of Sub section 3(j)ರನ್ವಯ ಟ್ರಾನ್ಸ್ ಫ್ಯಾಟ್‌ಗಳು ಉತ್ಪತ್ತಿಯಾಗುವುದನ್ನು ತಡೆಗಟ್ಟಲು ಅಡುಗೆ ಎಣ್ಣೆಯನ್ನು ಗರಿಷ್ಠ 3 ಬಾರಿ ಪುನಃ ಬಿಸಿ ಮಾಡಿ ಬಳಸಬಹುದಾಗಿದ್ದು, ಕೇಂದ್ರ FSSAI ರವರ ಪತ್ರ ಸಂಖ್ಯೆ:RCD-18/1/2021-Regulatory- FSSAI-Part(2), ದಿನಾಂಕ :24.02.2023ರಲ್ಲಿ ಕರಿದ ಎಣ್ಣೆಯಲ್ಲಿ Total Polar Compounds (TPC) ಅಂಶವು ಗರಿಷ್ಠ 25% ಇರಬಹುದಾಗಿದ್ದು, ಹೆಚ್ಚಿನ ಮಟ್ಟದಲ್ಲಿದ್ದರೆ ಆ ಎಣ್ಣೆಯು ಬಳಕೆಗೆ ಯೋಗ್ಯವಾಗಿಲ್ಲದಿರುವುದರಿಂದ ಅಂತಹ ಎಣ್ಣೆಯನ್ನು ಮರುಬಳಕೆ ಮಾಡದೆ ನೊಂದಾಯಿತ ಬಯೋಡೀಸೆಲ್ ಉತ್ಪಾದನಾ ಘಟಕದವರಿಗೆ ಮಾರಾಟ ಮಾಡಲು ಹಾಗೂ ಪ್ರತಿ ದಿನ 50ಲೀಟರ್‌ಗಳಿಗಿಂತ ಹೆಚ್ಚಿಗೆ ಅಡುಗೆ ಎಣ್ಣೆಯನ್ನು ಬಳಸುವ ಉದ್ದೇಶಕ್ಕಾಗಿ ಆಹಾರ ಉದ್ದಿಮೆದಾರರು ಅಡುಗೆ ಎಣ್ಣೆ ಬಳಕೆಯ ಕುರಿತಂತೆ ಮತ್ತು ಉಪಯೋಗಿಸಿದ ಅಡುಗೆ ಎಣ್ಣೆಯನ್ನು ಆಹಾರ ಉದ್ದಿಮೆದಾರರು ನೊಂದಾಯಿತ ಬಯೋಡೀಸೆಲ್ ಉತ್ಪಾದನಾ ಘಟಕದವರಿಗೆ ನೀಡುವಂತೆ ಸೂಚಿಸಲಾಗಿರುತ್ತದೆ. ಈ ಬಗ್ಗೆ ರಾಜ್ಯದಲ್ಲಿ ಸದರಿ ಅಂಶಗಳನ್ನು ಅನುಸರಿಸುವಂತೆ ಆಹಾರ ಉದ್ದಿಮೆದಾರರುಗಳಿಗೆ ದಿನಾಂಕ :20.03.2024ರಂದು ಆಯುಕ್ತಾಲಯ, ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇವರ ವತಿಯಿಂದ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ.

ಕೇಂದ್ರ FSSAI ರವರ Eat Right India Initiative ರ RUCO (Repurposed Used Cooking Oil) ಕಾರ್ಯಕ್ರಮ ಚಾಲ್ತಿಯಲ್ಲಿದ್ದು, ಬಳಸಿದ ಅಡುಗೆ ಎಣ್ಣೆಯನ್ನು (Used Cooking Oil – UCO) ಮರುಬಳಕೆ ಮಾಡುವುದರಿಂದ ಮರುಬಳಕೆ ಎಣ್ಣೆಯಲ್ಲಿ ಆರೋಗ್ಯಕ್ಕೆ ಹಾನಿಕರವಾದ ವಿಷಕಾರಿ ಅಂಶಗಳು ಉತ್ಪತ್ತಿಯಾಗುತ್ತವೆ. ಆದ್ದರಿಂದ ಬಳಸಿದ ಅಡುಗೆ ಎಣ್ಣೆಯನ್ನು ಬಳಸುವುದನ್ನು ನಿಯಂತ್ರಿಸುವ ಉದ್ದೇಶದಿಂದ ಕೇಂದ್ರ FSSAI ರವರು RUCO ಕಾರ್ಯಕ್ರಮವನ್ನು ಪರಿಚಯಿಸಲಾಗಿರುತ್ತದೆ. ಈ ಕಾರ್ಯಕ್ರಮದಡಿ 2022 ರಿಂದ ಇಲ್ಲಿಯವರೆಗೆ ರಾಜ್ಯದಲ್ಲಿ FSSAI ನೊಂದಾಯಿತ ಬಯೋಡೀಸೆಲ್ ಉತ್ಪಾದನಾ ಘಟಕದವರು 62,05,316 ಲೀಟರ್ ಕರಿದ ಅಡುಗೆ ಎಣ್ಣೆಯನ್ನು ರಾಜ್ಯದ ವಿವಿಧ ಆಹಾರ ಉದ್ದಿಮೆದಾರರಿಂದ ಸಂಗ್ರಹಿಸಲಾಗಿದೆ.

ಮುಂದುವರೆದು, 2024-25ನೇ ಸಾಲಿನಲ್ಲಿ ಆಹಾರ ಸುರಕ್ಷತಾಧಿಕಾರಿಗಳು ಆಹಾರ ಉದ್ದಿಮೆಗಳಿಗೆ ಪರಿಶೀಲನಾ ಭೇಟಿ ನೀಡಿದ ಸಂದರ್ಭದಲ್ಲಿ ಕರಿದ ಅಡುಗೆ ಎಣ್ಣೆಯನ್ನು ಪರೀಕ್ಷಿಸಲು TPC Meter Total Polar Compounds (TPC) ಸಾಧನಗಳನ್ನು ರಾಜ್ಯ ಸರ್ಕಾರದ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖಾ ವತಿಯಿಂದ ನೀಡಲಾಗಿರುತ್ತದೆ.

ಇಲಾಖೆಯಡಿ ಒಂದು ಸಂಚಾರಿ ಆಹಾರ ಪ್ರಯೋಗಾಲಯವು (Food Safety on Wheels) ಕಾರ್ಯ ನಿರ್ವಹಿಸುತ್ತಿದ್ದು, ರಾಜ್ಯಾದ್ಯಂತ ಆಹಾರ ಮಾದರಿಗಳ ವಿಶ್ಲೇಷಣೆ, ತರಬೇತಿ ನೀಡುವಿಕೆ ಹಾಗೂ ಸಾರ್ವಜನಿಕರಿಗೆ ಅರಿವು ಮೂಡಿಸಲು ಬಳಸಿಕೊಳ್ಳಲಾಗುತ್ತಿದ್ದು, 2025-26ನೇ ಸಾಲಿನಲ್ಲಿ 60 ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ. ಅಲ್ಲದೆ ಸದರಿ ಪ್ರಯೋಗಾಲಯದಲ್ಲಿ ಪರೀಕ್ಷಿಸಲು TPC Meter (Total Polar Compounds) ಸಾಧನವನ್ನು ಬಳಸಿ 28 ಕರಿದ ಅಡುಗೆ ಎಣ್ಣೆಯ ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸಲಾಗಿರುತ್ತದೆ.

ಕಳೆದ ಎರಡು ವರ್ಷಗಳಲ್ಲಿ ಬೀದಿ ಬದಿ ವ್ಯಾಪಾರಿಗಳಿಗೆ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006ರನ್ವಯ ರಾಜ್ಯಾದ್ಯಂತ 3757 ಬೀದಿ ಬದಿ ವ್ಯಾಪಾರ ಘಟಕಗಳಿಗೆ ಪರಿಶೀಲನಾ ಭೇಟಿ ನೀಡಿ ರಾಜ್ಯಾದ್ಯಂತ 3716 ಬೀದಿ ಬದಿ ಆಹಾರ ವ್ಯಾಪಾರಿಗಳಿಗೆ ನೈರ್ಮಲ್ಯತೆ, ಗುಣಮಟ್ಟ ಮತ್ತು ಕರಿದ ಅಡುಗೆ ಎಣ್ಣೆಯ ಮರು ಬಳಕೆ ಮಾಡುವುದನ್ನು ನಿಯಂತ್ರಿಸುವ ಕುರಿತ ತರಬೇತಿಯನ್ನು ನೀಡಲಾಗಿರುತ್ತದೆ.

ಅಲ್ಲದೆ ರಾಜ್ಯದ ಅಂಕಿತಾಧಿಕಾರಿಗಳಿಗೆ ಮತ್ತು ಆಹಾರ ಸುರಕ್ಷತಾಧಿಕಾರಿಗಳಿಗೆ Transfat Free Karnataka Initiative ಕಾರ್ಯಕ್ರಮವನ್ನು ಆಯೋಜಿಸುವ ಮುಖಾಂತರ ಅಡುಗೆ ಎಣ್ಣೆಯಲ್ಲಿನ Transfat ಕುರಿತಂತೆ ಆನ್‌ಲೈನ್ ಮತ್ತು ಆಫ್‌ಲೈನ್ ತರಬೇತಿಗಳನ್ನು ಕೈಗೊಳ್ಳಲಾಗಿರುತ್ತದೆ.

2022 ರಿಂದ ಇಲ್ಲಿಯವರೆಗೆ Fats and Oils, and Fat Emulsions ಗಳ Category ಗೆ ಸಂಬಂಧಿಸಿದಂತೆ ಅಡುಗೆ ಎಣ್ಣೆಯ ಮಾದರಿಗಳೂ ಒಳಗೊಂಡಂತೆ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೊಳಪಡಿಸಲಾಗಿದ್ದು, ಅವುಗಳಲ್ಲಿ 37 ಮಾದರಿಗಳು ಕಳಪೆ ಗುಣಮಟ್ಟ (Substandard) ಹೊಂದಿರುವುದಾಗಿ ಮತ್ತು 01 ಮಾದರಿಯು Unsafe ಎಂದು ವರದಿಯಾಗಿರುತ್ತದೆ.

ಕಳಪೆ ಗುಣಮಟ್ಟ ಹೊಂದಿರುವ ಅಡುಗೆ ಎಣ್ಣೆ ಮಾದರಿಗಳ ತಯಾರಕರು/ ಮಾರಾಟಗಾರರ ಮೇಲೆ ಅಪರ ಜಿಲ್ಲಾಧಿಕಾರಿಗಳು /ನ್ಯಾಯ ನಿರ್ಣಾಯಕಾಧಿಕಾರಿಗಳ ನ್ಯಾಯಾಲಯದಲ್ಲಿ ಮೊಕದ್ದಮೆಗಳನ್ನು ಹೂಡಲಾಗಿದ್ದು, ಸದರಿ ತಯಾರಕರು/ ಮಾರಾಟಗಾರರಿಗೆ ರೂ.4,60,000/-ಗಳ ದಂಡವನ್ನು ವಿಧಿಸಲಾಗಿರುತ್ತದೆ. ಉಳಿಕೆ ಪ್ರಕರಣಗಳ ನ್ಯಾಯಾಂಗ ಪ್ರಕ್ರಿಯೆಗಳು ಚಾಲ್ತಿಯಲ್ಲಿರುತ್ತವೆ ಹಾಗೂ ಅಸುರಕ್ಷಿತ ಎಂದು ವರದಿಯಾದ ಒಂದು ಪ್ರಕರಣವು JMFC ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿರುತ್ತದೆ.

ಇತ್ತೀಚೆಗೆ ಕೇರಳ ಸರ್ಕಾರವು ಮೂರು ಬಾರಿಗಿಂತ ಹೆಚ್ಚು ಬಾರಿ ಅಡುಗೆ ಎಣ್ಣೆಯನ್ನು ಪುನರ್ ಬಳಸದಂತೆ ನಿಷೇಧಿಸಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲೂ ಸಹ ಇದೇ ನಿಯಮವನ್ನು ಅಳವಡಿಸಿ ಮೂರು ಬಾರಿಗಿಂತ ಹೆಚ್ಚು ಬಾರಿ ಅಡುಗೆ ಎಣ್ಣೆ ಬಳಸುವುದನ್ನು ನಿಷೇಧಿಸಬೇಕೆನ್ನುವ ವಿಷಯವು ಪ್ರಸ್ತಾಪಿತವಾಗಿ, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಆಯುಕ್ತರು, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ, ಕೇರಳರವರು ಯಾವುದೇ ಆದೇಶವನ್ನು ಹೊರಡಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಸಂಖ್ಯೆ: ಆಕುಕ 176 ಎಸ್‌ಬಿವಿ 2025

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು